ಆ) ಈ ಕೊಳಚೆ ಪ್ರದೇಶದವರಿಗೆ ಪುನರ್ವಸತಿ ನಿರ್ಮಾಣ ಮಾಡುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಸದ್ಯಕ್ಕೆ ಈ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (484)289
ಸದಸ್ಯರ ಹೆಸರು : ಶ್ರೀ ಆರ್.ಧ್ರುವನಾರಾಯಣ್ (ಕೊಳ್ಳೇಗಾಲ)
ಉತ್ತರಿಸುವ ಸಚಿವರ ಹೆಸರು : (ಶ್ರಿ ಎಸ್.ಎನ್.ಕೃಷ್ಣಯ್ಯ ಶೆಟ್ಟಿ) ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

ಅ) ಸರ್ಕಾರ ಆಶ್ರಯ ಯೋಜನೆಯ ಫಲಾನುಭವಿಗಳಿಗೆ ರೂ.30,000/– ಹಾಗೂ ಡಾ: ಅಂಬೇಡ್ಕರ್ ಆವಾಸ್ ಮನೆ ಫಲಾನುಭವಿಗಳಿಗೆ ರೂ.25,000/– ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ ಡಾ: ಅಂಬೇಡ್ಕರ್ ಮನೆಯ ಫಲಾನುಭವಿಗಳಿಗೆ ಅನುದಾನವನ್ನು ಹೆಚ್ಚಿಸುವ ಉದ್ದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಇ) ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಸರ್ಕಾರವು, 2007–08ನೇ ಸಾಲಿನಿಂದ ಡಾ: ಅಂಬೇಡ್ಕರ್ ಅಭಿವೃದ್ಧಿ ಯೋಜನೆಯ ಘಟಕ ವೆಚ್ಚವನ್ನು ರೂ.30,000/– ಕ್ಕೆ ಹೆಚ್ಚಿಸಲು ಮಂಜೂರಾತಿ ನೀಡಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (332)290
ಸದಸ್ಯರ ಹೆಸರು : ಡಾ: ಸುಧಾಕರ್ ಎಂ.ಸಿ
ಉತ್ತರಿಸುವ ಸಚಿವರು : (ಶ್ರೀ ಅರವಿಂದ ಲಿಂಬಾವಳಿ) ಮಾನ್ಯ ಉನ್ನತ ಶಿಕ್ಷಣ ಸಚಿವರು.

ಅ) ಚಿಂತಾಮಣಿ ತಾಲ್ಲೂಕಿನ ಸರ್ಕಾರಿ ಪಾಲಿಟೆಕ್ನಿಕ್‌ನಲ್ಲಿ ಭೋದಕರು ಹಾಗೂ ಭೋದಕೇತರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಹೌದು

ಆ) ಹಾಗಿದ್ದಲ್ಲಿ, ಈ ಖಾಲಿ ಹುದ್ದೆಗಳಿಂದಾಗಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವುದು ನಿಜವೇ;

ಖಾಲಿಯಿರುವ ಬೋಧಕ ವೃಂದದ ಹುದ್ದೆಗಳಿಗೆದುರಾಗಿ ಅರೆಕಾಲಿಕ ಉಪನ್ಯಾಸಕರುಗಳನ್ನು ಹಾಗೂ ಬೋಧಕೇತರ ವೃಂದದ (ಗ್ರೂಪ್-ಡಿ) ಹುದ್ದೆಗಳಿಗೆದುರಾಗಿ ಅಕುಶಲದಾಳುಗಳನ್ನು ನೇಮಿಸಿಕೊಳ್ಳಲಾಗಿರುವುದರಿಂದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವುದಿಲ್ಲ.

ಇ) ಈ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು (ವಿವರ ನೀಡುವುದು)?

ಖಾಲಿಯಿರುವ ಬೋಧಕ ಹಾಗೂ ಬೋಧಕೇತರ ವೃಂದದಲ್ಲಿನ ಮೆಕ್ಯಾನಿಕ್, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿ ಮಾಡುವ ಕುರಿತಂತೆ ಕರ್ನಾಟಕ ಲೋಕ ಸೇವಾ ಆಯೋಗವು ಅಧಿಸೂಚನೆ ಹೊರಡಿಸಿದ್ದು, ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(333)291**
ಸದಸ್ಯರ ಹೆಸರು	:	**ಡಾ: ಸುಧಾಕರ್ ಎಂ.ಸಿ**
ಉತ್ತರಿಸುವ ಸಚಿವರು	:	**(ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**

ಅ) ಚಿಂತಾಮಣಿ ತಾಲ್ಲೂಕಿನ ಬಾಲಕರ ಹಾಗೂ ಬಾಲಕಿಯರ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕರು ಹಾಗೂ ಬೋಧಕೇತರರ ಸಂಖ್ಯೆ ಎಷ್ಟು;(ಹುದ್ದೆವಾರು, ಕಾಲೇಜು ವಾರು ವಿವರ ನೀಡುವುದು);

ಬೋಧಕರು–45

ಬೋಧಕೇತರರು–03

ಒಟ್ಟು–48

ಹುದ್ದೆವಾರು ಕಾಲೇಜುವಾರು ವಿವರ ಲಗತ್ತಿಸಿದೆ.

ಆ) ಹಾಗಿದ್ದಲ್ಲಿ, ಹುದ್ದೆ ಖಾಲಿ ಇರುವುದರಿಂದ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ತೊಂದರೆಯಾಗುತ್ತಿರುವುದು ನಿಜವಲ್ಲವೆ;

ಇಲ್ಲ.

ಉಪನ್ಯಾಸಕರ ಕೊರತೆ ಇರುವ ಪದವಿ ಪೂರ್ವ ಕಾಲೇಜುಗಳಿಗೆ ಕಡಿಮೆ ಕಾರ್ಯಭಾರ ಹೊಂದಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಂದ ಉಪನ್ಯಾಸಕರನ್ನು ತಾತ್ಕಾಲಿಕವಾಗಿ ನಿಯೋಜಿಸಲು ಜಿಲ್ಲಾ ಉಪ ನಿರ್ದೇಶಕರು ಕ್ರಮ ಕೈಗೊಂಡಿದ್ದು, ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗಿರುವುದಿಲ್ಲ.

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;